ಎಲ್ಲವನ್ನು ಒಂದು ಎಂದು ಮಾಡಿ ಹಣವನ್ನು ಏಕೆ ಬಿಡುಗಡೆ ಮಾಡಬಾರದು. ಏಕೆಂದರೆ ಜಾತ್ಯಾತೀತ ಭಾರತವನ್ನು ಕಟ್ಟುತ್ತಿರತಕ್ಕಂತಹ ಈ ಸಂದರ್ಭದಲ್ಲಿ ಒಂದು ದೇವಸ್ಥಾನ ಏಕೆ ಕಟ್ಟಬಾರದು?

ಅಧ್ಯಕ್ಷರು : ತಮ್ಮ ಸಲಹೆ ಉತ್ತಮವಾದದ್ದು, ಅದರ ಬಗ್ಗೆ ಒಂದು ಕವನ ಬರೆದುಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅದು ಆ ರೀತಿ ಆಗುವುದಿಲ್ಲ. ಸಾವಿರಾರು ಹೆಣ್ಣು ದೇವರುಗಳು, ಸಾವಿರಾರು ಗಂಡು ದೇವರುಗಳು ಇರುವಾಗ ಬರೀ ಒಂದು ದೇವಸ್ಥಾನ ಆಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಸನ್ಮಾನ್ಯ ಸದಸ್ಯರಾದ ಶಿವಪ್ಪನವರು ಹೇಳಿದಂತಹ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಜಿಲ್ಲಾಧಿಕಾರಿಗಳಿಗೆ ನೀವು ಒಂದು ಸುತ್ತೋಲೆಯನ್ನು ಕಳುಹಿಸಿಕೊಡಿ. ಆರಾಧನಾ ಪಟ್ಟಿಯನ್ನು ಕಳುಹಿಸಿಕೊಡುವಾಗ ಅದೇ ಸಂಸ್ಥೆಗಳಿಗೆ ಈಗಾಗಲೇ ಮುಜರಾಯಿ ಇಲಾಖೆಯಿಂದ ಹಣವನ್ನು ಬಿಡುಗಡೆ ಮಾಡಿದ್ದರೆ ಅಂಥಾದಕ್ಕೆ ಪುನಃ ಹಣವನ್ನು ಕೊಡಬಾರದು. ಆ ವಿಚಾರ ತಾವು ಎಚ್ಚರಿಕೆ ವಹಿಸಬೇಕಾಗುತ್ತದೆ.

ದಾವಣಗೆರೆ ತಾಲ್ಲೂಕಿನಲ್ಲಿ ಬಸ್ಸ್‌ನ ತೊಂದರೆ

294 - ಶ್ರೀ ಎನ್. ಎ. ರವೀಂದ್ರನಾಥ್ (ಮಾಯಕೊಂಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *1997-98ನೇ ಸಾಲಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಎಷ್ಟು ಹೊಸ ಬಸ್ಸುಗಳನ್ನು ಕೊಳ್ಳಲಾಗಿದೆ?*

ಆ) *ಚಿತ್ರದುರ್ಗ ಜಿಲ್ಲೆಗೆ ಎಷ್ಟು ಬಸ್ಸುಗಳನ್ನು ನೀಡಲಾಗಿದೆ?*

ಇ) *ದಾವಣಗೆರೆ ತಾಲ್ಲೂಕಿನಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಸಾಕಷ್ಟು ಬಸ್ಸುಗಳಿಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) :

ಅ) 1997-98ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 2000 ಹೊಸ ವಾಹನಗಳನ್ನು ಸೇರ್ಪಡೆ ಮಾಡಲು ಯೋಜಿಸಿದ್ದು, ಜೂನ್ ತಿಂಗಳ ಅಂತ್ಯದವರೆಗೆ 348 ವಾಹನಗಳ ಅಡಿಗಟ್ಟುಗಳನ್ನು ಖರೀದಿಸಿದೆ.

ಆ) ಸಾರಿಗೆ ಸಂಸ್ಥೆಯು ದಾವಣಗೆರೆ ವಿಭಾಗಕ್ಕೆ (ಚಿತ್ರದುರ್ಗ ಜಿಲ್ಲೆ) ಈ ಸಾಲಿನಲ್ಲಿ ಒಟ್ಟು 51 ಹೊಸ ವಾಹನಗಳನ್ನು ನೀಡಲು ಯೋಜಿಸಿದ್ದು, ಏಪ್ರಿಲ್ 97 ರಿಂದ ಜೂನ್ ಅಂತ್ಯದವರೆಗೆ 19 ವಾಹನಗಳನ್ನು ನೀಡಿದೆ.

ಇ) ಇಲ್ಲ

ಶ್ರೀ ಎನ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ದಾವಣಗೆರೆ ತಾಲ್ಲೂಕಿನಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಸಾಕಷ್ಟು ಬಸ್‌ಗಳಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಪ್ರಶ್ನೆಯನ್ನು ಕೇಳಿದ್ದರೆ ಇಲ್ಲ ಎಂದು ಉತ್ತರವನ್ನು ನೀಡಿದ್ದಾರೆ. ಅವರು 100 ದಿವಸಗಳ ಸಾಧನೆಯಲ್ಲಿ ನಮ್ಮ ದಾವಣಗೆರೆಯ ಎಲ್ಲಾ ಶಾಸಕರನ್ನು ಮತ್ತು ಅಧಿಕಾರಿಗಳನ್ನು ಮೀಟ್ ಮಾಡಿದ್ದರು. ಆಗ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದರು ಈಗ ಉತ್ತರದಲ್ಲಿ ನೋಡಿದರೆ ಇಲ್ಲ ಎಂದು ಹೇಳುತ್ತಿದಾರೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂದು ಕೇಳುತ್ತೇನೆ.

SRI P.G.R. SINDHIA : Chitradurga is again not a totally nationalised area. Partially some routes have been nationalised. ಹೀಗಾಗಿ ಅಲ್ಲಿ ಬಸ್ ಛಾವಣಿಯ ಮೇಲೆ ಪ್ರಯಾಣ ಮಾಡತಕ್ಕಂಥದ್ದು ವಿಶೇಷವಾಗಿ ದಾವಣಗೆರೆ, ಚಿತ್ರದುರ್ಗದ ಸುತ್ತಮುತ್ತ, ಪಟ್ಟಣ ಪ್ರದೇಶವಾದ ಚಳ್ಳಕೆರೆ - ಹೀಗೆ ಕೆಲವು ಪ್ರದೇಶಗಳಲ್ಲಿ ಅಡಚಣೆ ಇರತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ಅವರು ಕೇಳಿರತಕ್ಕ ಪ್ರಶ್ನೆಗಳಿಗೆ ನಾನು ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ಏನೆಂದರೆ, ಆ ವರ್ಷ ಸಾರಿಗೆ ಸಂಸ್ಥೆಗೆ 2000 ಹೊಸ ವಾಹನಗಳನ್ನು ಸೇರ್ಪಡೆ ಮಾಡುತ್ತಿದ್ದು ಚಿತ್ರದುರ್ಗ ಜಿಲ್ಲೆಗೆ 51 ವಾಹನಗಳನ್ನು ಕೊಡುತ್ತಾ ಇದ್ದೇವೆ. ಈಗಾಗಲೇ ಏಪ್ರಿಲ್, ಮೇ, ಜೂನ್ ತಿಂಗಳಿನ ಅಂತ್ಯದೊಳಗೆ 19 ಬಸ್‌ಗಳನ್ನು ಒದಗಿಸಿದ್ದೇವೆ. ಉಳಿದಿರತಕ್ಕಂತಹ ಬಸ್‌ಗಳನ್ನು ಸಹಿತ ಕೊಡುತ್ತೇವೆ. ಅವಶ್ಯಕತೆ ಬಿದ್ದರೆ ಇನ್ನು ಎರಡು ಮೂರು ಬಸ್‌ಗಳನ್ನು ಹೆಚ್ಚಿಗೆ ಕೊಡಬೇಕು ಎನ್ನುವುದಾದರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ.

ಶ್ರೀ ಎನ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೇ, ನಾನು ದಾವಣಗೆರೆಯ ಗ್ರಾಮಾಂತರ ಪ್ರದೇಶಕ್ಕಾಗಿ ಬಸ್‌ಗಳನ್ನು ಕೊಡಿ ಎಂದು ಕೇಳಿರುವಂಥದ್ದು. ಆದರೆ ಇವರು ಕೊಟ್ಟಿರತಕ್ಕಂತಹ ಬಸ್‌ಗಳು ದಾವಣಗೆರೆಯಿಂದ ಬೊಂಬಾಯಿಗೆ ಹೋಗತಕ್ಕಂಥದ್ದು, ಮತ್ತು ಮಂಗಳೂರಿಗೆ ಹೋಗತಕ್ಕಂಥದ್ದು, ತಿರುಪತಿಗೆ ಹೋಗತಕ್ಕಂಥಹ ಬಸ್‌ಗಳನ್ನು ಕೇಳುತ್ತಿಲ್ಲ. ನಾನು ನನ್ನ ಕ್ಷೇತ್ರವಾದ ಮಾಯಕೊಂಡ ದಾವಣಗೆರೆಯಿಂದ 35 ಕಿ.ಮೀಟರ್ ದೂರದಲ್ಲಿದೆ. ಅಲ್ಲಿಗೆ ಹೋಗಿ ಬರುವುದಕ್ಕೆ 2-3 ವರ್ಷಗಳಾದರೂ ಕೂಡ ಒಂದು ಬಸ್ ಸಹ ಇಲ್ಲ. ಈ ತೊಂದರೆಯನ್ನು ಹೇಳಿದಾಗಲೆಲ್ಲ ಬಸ್‌ಗಳನ್ನು ಕೊಡುತ್ತೇವೆ, ಕೊಡುತ್ತೇವೆಂದು ಹೇಳುತ್ತಾರೆ. ದಾವಣಗೆರೆಯು ಜಿಲ್ಲಾ ಕೇಂದ್ರವಾಗುತ್ತಿರುವುದರಿಂದ ಈಗ ಬಹಳ ಅವಶ್ಯಕತೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ನಾನು ಸಲಹೆಯನ್ನು ಕೊಡತಕ್ಕಂಥದ್ದು ಏನೆಂದರೆ, ಅದು ಜಿಲ್ಲಾ ಕೇಂದ್ರವಾಗಿರುವುದರಿಂದಲೇ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಡಿವಿಜನಲ್ ವರ್ಕ್ ಶಾಪನ್ನು ಮಂಜೂರು ಮಾಡಿ ಕೆಲಸವನ್ನೂ ಸಹ ಪ್ರಾರಂಭ ಮಾಡಿಸಿದ್ದೇನೆ. ಜೊತೆಗೆ ಇನ್ನೊಂದು ಡಿಪೋವನ್ನೂ ಸಹಿತ ಪ್ರಾರಂಭ ಮಾಡಬೇಕೆಂದು ಇದ್ದೇವೆ. ಬಸ್‌ಗಳನ್ನು ಕ್ಷೇತ್ರವಾರು ಕೊಡುವುದಕ್ಕೆ ಆಗುವುದಿಲ್ಲ, ಡಿಪೋವಾರು ಕೊಡಬೇಕಾಗುತ್ತದೆ.

ಅವರಿಗೆ ಒಂದು ಸಲಹೆಯನ್ನು ಕೊಡುವುದೇನೆಂದರೆ, ದಾವಣಗೆರೆಯಲ್ಲಿ ಎಲ್ಲಿ ಬಸ್‌ಗಳ ಓಡಾಟ ಕಡಿಮೆ ಇದೆ, ಎಲ್ಲಿ ಬಸ್‌ಗಳ ಅವಶ್ಯಕತೆ ಇದೆ ಅದರ ಬಗ್ಗೆ ಮಾಹಿತಿಯನ್ನು ಒದಗಿಸಿಕೊಟ್ಟರೆ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೇ, ಹಿಂದಿನ ಸಾರಿಗೆ ಸಚಿವರೂ ಸಹ ಇದೇ ಮಾತನ್ನು ಹೇಳುತ್ತಿದ್ದರು. ನೀವೂ ಸಹ ಇದೇ ಮಾತನ್ನು ಹೇಳುತ್ತಿದ್ದೀರಿ.

ಅಧ್ಯಕ್ಷರು : ದಯಮಾಡಿ ಅವರ ಕ್ಷೇತ್ರವಾದ ಮಾಯಕೊಂಡಕ್ಕೆ ಬಸ್ ಸೌಕರ್ಯವನ್ನು ಮಾಡಿಕೊಡಿ. ಒಂದು ವೇಳೆ ಆಗಲಿಲ್ಲ ಎಂದರೆ ನನ್ನನ್ನು ಭೇಟಿಯಾಗಿ ನಾನು ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೇ, ಎಲ್ಲರೂ ಭೇಟಿಯಾಗಿ ಭೇಟಿಯಾಗಿ ಎಂದು ಹೇಳುತ್ತೀರಿ. ಎಲ್ಲವನ್ನು ನೀವು ಯಾವ ರೀತಿಯಲ್ಲಿ ಮಾಡುತ್ತೀರಿ. ಮಂತ್ರಿಗಳೇ ಒಂದೊಂದನ್ನು ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಪಿ.ಜಿ.ಆರ್. ಸಿಂಧ್ಯಾ ಅವರಿಗೆ ಒರಿಜಿನಲ್ ಟ್ರೈನಿಂಗ್ ನಿಮ್ಮಲ್ಲಿ ಅಲ್ಲವೇ? ಹೆಚ್ಚು ಕಡಿಮೆಯಾದರೆ ನಿಮ್ಮದೇ ಜವಾಬ್ದಾರಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕಂತಹ ಪ್ರಶ್ನೆ 1997-98ಕ್ಕೆ ಎಷ್ಟು ಹೊಸ ಬಸ್‌ಗಳನ್ನು ಖರೀದಿ ಮಾಡಿರುತ್ತೀರಿ ಎಂದು. ಆದರೆ ತಾವು ಉತ್ತರದಲ್ಲಿ 2,000 ಬಸ್‌ಗಳ ಅವಶ್ಯಕತೆ ಇದೆ, 348 ಚಾಸೀಸ್ ಮಾತ್ರ ಖರೀದಿಸಿದೆ ಎಂದು ಹೇಳಿರುತ್ತೀರಿ. ಅದಕ್ಕೆ ಬಸ್‌ಗಳನ್ನು ಕೊಟ್ಟ ಹಾಗೆ ಆಗುವುದಿಲ್ಲ. ಚಾಸಿಗಳನ್ನು ಮಾತ್ರ ಖರೀದಿ ಮಾಡಿರುತ್ತೀರಿ 348 ಚಾಸಿಗಳಿಗೆ ಕೆ.ಎಸ್.ಆರ್.ಟಿ.ಸಿ.ಯ ಒಳಗಡೆಯೇ ಬಾಡಿಯನ್ನು ಕಟ್ಟಿರುತ್ತೀರಿ ಅಂದರೆ ನಮ್ಮ ರಾಜ್ಯದಲ್ಲಿಯೇ ಬಾಡಿಯನ್ನು ಕಟ್ಟಿಸಿರುತ್ತೀರೋ ಅಥವಾ ಹೊರ ರಾಜ್ಯಕ್ಕೆ ಬಾಡಿಯನ್ನು ಕಟ್ಟಿವುದಕ್ಕೆ ಕೊಟ್ಟಿರುತೀರೋ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, 2,000 ಬಸಗಳನ್ನು ಅಂದರೆ ಚಾಸಿಗಳನ್ನು ತೆಗೆದು ಕೊಳ್ಳುವಂಥದ್ದು ಈ ವರ್ಷದ ಆ್ಯಕ್ಷನ್ ಪ್ಲಾನ್‌ನಲ್ಲಿದೆ. ಏಪ್ರಿಲ್, ಮೇ, ಜೂನ್ ತಿಂಗಳಿನಲ್ಲಿ ಕೆ.ಎಸ್.ಆರ್.ಟಿ.ಸಿ.ಯವರು 348 ಚಾಸಿಗಳನ್ನು ತೆಗೆದುಕೊಂಡಿದ್ದಾರೆ.

11.00 ಎ.ಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಎರಡೇ ಸಂಸ್ಥೆಯವರು ಚಾಸಿಗಳನ್ನು ತಯಾರು ಮಾಡತಕ್ಕಂಥವರು. ಒಂದು ಟೆಲ್ಕೋದವರು, ಮತ್ತೊಂದು ಅಶೋಕ್‌ಲೇಲ್ಯಾಂಡ್‌ನವರು. ಅದಕ್ಕೆ ಎಷ್ಟು ರೇಟ್ ಕೊಡಬೇಕೆಂಬುದನ್ನು ಕೇಂದ್ರ ಸರಕಾರದವರು ಫಿಕ್ಸ್ ಮಾಡುತ್ತಾರೆ. ಇಡೀ ದೇಶದಲ್ಲಿರತಕ್ಕಂಥ ಒಟ್ಟು 60 ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗೆ ಅದೇ ರೇಟ್‌ನಲ್ಲಿ ಕೊಡುತ್ತಾರೆ. ಬಾಡಿಯನ್ನು

ಕೆ.ಎಸ್.ಆರ್.ಟಿ.ಸಿ. ಯವರೇ ಮಾಡುತ್ತಾರೆ, ಹೊರಗಡೆ ಮಾಡಿಸುವುದಿಲ್ಲ. ಫೈಟಿಕ್, ಡೀಲೆಕ್ಸ್ ಮತ್ತು ಸೂಪರ್ ಡೀಲೆಕ್ಸ್‌ನ ಸುಮಾರು 200-250 ಬಸ್‌ಗಳನ್ನು ಮಾತ್ರ ಹೊರಗಡೆ ಮಾಡಿಸಿಕೊಳ್ಳತಕ್ಕಂಥಾದ್ದು. ಈ ಆರ್ಡಿನರಿ ಬಸ್‌ಗಳ 2000ಗಳಷ್ಟು ಏನಿವೆ ಅವುಗಳೆಲ್ಲವನ್ನೂ ಸಾರಿಗೆ ಸಂಸ್ಥೆಯವರೇ ಮಾಡುತ್ತಾರೆ. ಅದರ ಜೊತೆಗೆ ಇನ್ನೊಂದು ವಿಚಾರವನ್ನು ಹೇಳಬಯಸುವುದೇನೆಂದರೆ, ಚಾಸಿಗಳನ್ನು ಹೊರಗಡೆ ಮಾಡಿಸಿದರೆ ಅನುಕೂಲವಾಗುತ್ತದೆ. ಆದರೆ ನಾವೇ ಮಾಡುತ್ತಿರುವುದರಿಂದ ಸುಮಾರು 25ಸಾವಿರ ರೂಪಾಯಿಗಳಷ್ಟು ಪ್ರೊಡೆಕ್ಷನ್ ಕಾಸ್ಟ್ ಜಾಸ್ತಿಯಾಗುತ್ತಾ ಇದೆ ಎಂಬ ವಿಚಾರವನ್ನೂ ಕೂಡ ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ.

ಸಿಂಧನೂರು ಕೃಷಿ ಮಾರುಕಟ್ಟೆ ಸಮಿತಿಯ ಯಾರ್ಡ್‌ನಲ್ಲಿರುವ ಮೂಲೆ ಪ್ಲಾಟುಗಳ ಏಲೇವಾರಿ

295 - ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಯಾರ್ಡ್‌ನಲ್ಲಿರುವ ಮೂಲೆಗಳ ಪ್ಲಾಟುಗಳು ಎಷ್ಟು? ಹಳೆ ಯಾರ್ಡ್ ಮತ್ತು ವಿಸ್ತೃತ ಯಾರ್ಡ್‌ನ ವಿವರ ನೀಡುವುದು?

ಆ) ಮೂಲೆ ಪ್ಲಾಟುಗಳನ್ನು ವಿಲೇವಾರು ಮಾಡುವಲ್ಲಿ ಇಲಾಖೆಯ ನೀತಿ ನಿಯಮಗಳೇನು?

ಇ) ಸಿಂಧನೂರು ಮಾರುಕಟ್ಟೆ ಯಾರ್ಡ್‌ನಲ್ಲಿ ಈ ವರ್ಷದಲ್ಲಿ ಮೂಲೆ ಪ್ಲಾಟುಗಳನ್ನು ವ್ಯಾಪಾರಿಗಳಿಗೆ ವಿಲೇವಾರಿ ಮಾಡಲಾಗಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿವೆಯೇ ಹಾಗಿದ್ದಲ್ಲಿ ಎಷ್ಟು ಮೂಲೆ ಪ್ಲಾಟುಗಳನ್ನು ಯಾರ್ಯಾರಿಗೆ ಹಂಚಲಾಗಿದೆ ವಿವರ ಒದಗಿಸುವುದು?

ಈ) ಹಂಚಲಾಗಿರುವ ಮೂಲ ಪ್ಲಾಟುಗಳು ಇಲಾಖೆಯ ನೀತಿ ನಿಯಮಾನುಸಾರ ಹಂಚಲಾಗಿದೆಯೇ ನಿಯಮಗಳನ್ನು ಒದಗಿಸಿ ಹಂಚಲಾಗಿದ್ದರೆ ಈ ಬಗ್ಗೆ ಸರ್ಕಾರದವರ ಕ್ರಮವೇನು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಸಿಂಧನೂರು ಮಾರುಕಟ್ಟೆ ಪ್ರಾಂಗಣದಲ್ಲಿ ಒಟ್ಟು 34 ಮೂಲೆ ನಿವೇಶನಗಳು ಇರುತ್ತವೆ. ಇದರಲ್ಲಿ 31 ಹಳೆ ಮಾರುಕಟ್ಟೆ ಪ್ರಾಗಂಣದಲ್ಲಿ ಮತ್ತು 3 ವಿಸ್ತೃತ ಮಾರುಕಟ್ಟೆ ಪ್ರಾಗಂಣದಲ್ಲಿರುತ್ತದೆ.

ಆ) ದಿನಾಂಕ 27-12-91 ರಲ್ಲಿ ಕೃಷಿ ಮಾರಾಟ ಇಲಾಖೆಯು ರೂಪಿಸಲಾದ ಮಾರ್ಗ ಸೂಚಿ ಅನ್ವಯ ಮೂಲೆ ನಿವೇಶನಗಳನ್ನು ಮಾರುಕಟ್ಟೆ ಸಮಿತಿಗಳು ತಮ್ಮ ಅಭಿವೃದ್ಧಿ ಕಾರ್ಯಗಳಿಗೆ ಕಾಯ್ದಿರಿಸಿಕೊಳ್ಳಬೇಕು, ಈ ನಿವೇಶನಗಳ ಸಮಿತಿಯ ಅಭಿವೃದ್ಧಿ ಕಾರ್ಯಕ್ಕೆ ಬೇಕಾಗಿಲ್ಲವೆಂದು ತೀರ್ಮಾನಕ್ಕೆ ಬಂದಾಗ ಇದನ್ನು ಬಹಿರಂಗ ಹರಾಜಿನ ಮೂಲಕ ಪೇಟೆ ಕಾರ್ಯಕರ್ತರಿಗೆ ವಿತರಿಸಬೇಕು.